# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301

**OFFICE OF THE DEPUTY COMMISSIONER, UTTARA KANNADA DISTRICT, KARWAR, -581 301**

ದೂರವಾಣಿ: (08382) 226406/226471/222071, ಫ್ಯಾಕ್ಸ್: 226603/222072 Email: dckarwar@gmail.com


---

**ಸಂ. ಡಿಸಿಬಿ/ಎಂಎಜಿ/ಇತರೆ/ವಿವ-401/2019-20** **19-03-2020**

ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋವಿಡ್-19 ಎಂಬ ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡದಂತೆ ಸೂಕ್ತ ಮುಂಜಾಗೃತ ಕ್ರಮ ಜರುಗಿಸುವ ಕುರಿತು.

ಉಲ್ಲೇಖ: 1. ಸಾಂಕ್ರಮಿಕ ರೋಗ ಕಾಯ್ದೆ 1897

2. ಕರ್ನಾಟಕ ಸರಕಾರದ ಅಧಿಸೂಚನೆ ಸಂಖ್ಯೆ ಹೆಚ್ ಎಫ್ ಡಬ್ಲ್ಯೂ / 54/ ಸಿಜಿಎಂ/2020 ದಿನಾಂಕ: 11-3-2020.

3. ಈ ಕಚೇರಿ ಸಮಕ್ರಮಾಂಕದ ಆದೇಶ ದಿನಾಂಕ: 13-3-2020 ಮತ್ತು 17-3-2020

**ಪ್ರಸ್ತಾವನೆ:**

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋವಿಡ್-19 ವೈರಾಣುಗಳಿಂದ ಹರಡುವ ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ದೃಷ್ಟಿಯಿಂದ ಪ್ರವಾಸ ಕಾರ್ಯಕ್ರಮಗಳನ್ನು ಮುಂದೂಡಲು ಜಿಲ್ಲೆಯ ಹೊರಗಿನ ಎಲ್ಲಾ ಪ್ರವಾಸಿಗರಿಗೆ ಮಾಧ್ಯಮದ ಮೂಲಕ ಸೂಚನೆ ನೀಡಲಾಗಿರುತ್ತದೆ. ಅದೇ ರೀತಿ ಜಿಲ್ಲೆಯಲ್ಲಿನ ಎಲ್ಲಾ ಪ್ರವಾಸಿ ತಾಣಗಳನ್ನು ಸಹ ಮುಚ್ಚಲಾಗಿರುತ್ತದೆ. ಆದಾಗ್ಯೂ ಸಹ ಪ್ರವಾಸಿಗರೂ ಸತತವಾಗಿ ಜಿಲ್ಲೆಗೆ ಭೇಟಿ ನೀಡುತ್ತಿರುವುದು ಗಡಿ ತನಿಖಾ ಠಾಣೆಗಳಲ್ಲಿ ಸಂಗ್ರಹಿಸಿದ ಮಾಹಿತಿಯಿಂದ ತಿಳಿದು ಬಂದಿರುತ್ತದೆ. ಇದರಿಂದ ಉತ್ತರ ಕನ್ನಡ ಜಿಲ್ಲೆಯ ನಿವಾಸಿಗರಲ್ಲಿ ಕೋವಿಡ್-19 ವೈರಾಣು ಹರಡುವ ಭೀತಿ ಹೆಚ್ಚಾಗಿದ್ದು ಆಡಳಿತ ಯಂತ್ರದ ಮೇಲೂ ಸಹ ಸಂಶಯ ಉಂಟಾಗಲೂ ಕಾರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಪ್ರವಾಸಿಗರ ಆಗಮನವನ್ನು ನಿಷೇದಿಸುವುದು ಸೂಕ್ತವೆಂದು ಮನವರಿಕೆಯಾಗಿರುತ್ತದೆ. ಉಲ್ಲೇಖ(3)ರ ಅಧಿಸೂಚನೆಯ ಅನುಕ್ರಮಾಂಕ 13 ರಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿಯ ಮುಖ್ಯಸ್ಥನಾಗಿ ಕೋವಿಡ್-19 ವೈರಾಣುಗಳ ತಡೆಗೆ ಸೂಕ್ತವಾದ ಯೋಜನಾ ತಂತ್ರ ರೂಪಿಸಿ ಅನುಷ್ಠಾನಕ್ಕೆ ತರಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರದತ್ತಕರಿಸಲಾಗಿದೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಿದೆ-

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಮತ್ತು ಅಧಿಸೂಚನೆ ಸಂಖ್ಯೆ ಹೆಚ್ ಎಫ್ ಡಬ್ಲ್ಯೂ/ 54/ ಸಿಜಿಎಂ/2020 ದಿನಾಂಕ: 11-3-2020 ರನ್ವಯ ನನ್ನಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಉತ್ತರ ಜಿಲ್ಲೆಯಲ್ಲಿ ಕೋವಿಡ್-19 ವೈರಾಣುಗಳ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಉತ್ತರ ಕನ್ನಡ ಜಿಲ್ಲೆಗೆ ಹೊರ ಜಿಲ್ಲೆ/ಹೊರ ರಾಜ್ಯ ಮತ್ತು ಅಂತರಾಷ್ಟ್ರೀಯ ಪ್ರವಾಸಿಗರ ಆಗಮನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನಿಷೇಧಿಸಿ ಆದೇಶಿಸಿದೆ.

Scanned with CamScanner

ಜಿಲ್ಲೆಯ ಎಲ್ಲಾ ತಹಶೀಲ್ದಾರರು ಮತ್ತು ಸಹಾಯಕ ಆಯುಕ್ತರು ಈ ಆದೇಶವನ್ನು ಅನುಷ್ಠಾನಗೊಳಿಸಲು ತಮ್ಮ ಕಾರ್ಯವ್ಯಾಪ್ತಿಯ ಗಡಿಯಲ್ಲಿ ತನಿಖಾ ಠಾಣೆಗಳನ್ನು ಸ್ಥಾಪಿಸಿ ಆರಕ್ಷಕ ಇಲಾಖೆಯ ಸಹಕಾರದೊಂದಿಗೆ ಜಿಲ್ಲೆಗೆ/ತಾಲೂಕಿಗೆ ಆಗಮಿಸುವ ಪ್ರತಿ ವ್ಯಕ್ತಿಯ ಮಾಹಿತಿಯನ್ನು ಕ್ರೂಡೀಕರಿಸಿ ದಿನನಿತ್ಯ ಈ ಕಾರ್ಯಾಲಯಕ್ಕೆ ಮಾಹಿತಿ ಸಲ್ಲಿಸತಕ್ಕದ್ದು. ಈ ಆದೇಶವನ್ನು ಸಂಪೂರ್ಣತೆಯಿಂದ ಅನುಷ್ಠಾನಗೊಳಿಸಲು ತಹಶೀಲ್ದಾರರು ಮತ್ತು ಸಹಾಯಕ ಆಯುಕ್ತರು ಬದ್ಧರಾಗಿರುತ್ತಾರೆ. ಈ ಆದೇಶವನ್ನು ಉಲ್ಲಂಘಿಸುವವರು ಅಧಿಸೂಚನೆ ಸಂಖ್ಯೆ ಹೆಚ್ ಎಫ್ ಡಬ್ಲ್ಯೂ/ 54/ ಸಿಜಿಎಂ/2020 ದಿನಾಂಕ: 11-3-2020 ರನ್ವಯ ಧಂಡನೀಯ ಕ್ರಮಕ್ಕೆ ಅರ್ಹರಿರುತ್ತಾರೆ.

ಜಿಲ್ಲಾ ದಂಡಾಧಿಕಾರಿ, ಉ.ಕ.
District Magistrate, Uttara Kannada

(ಡಾ. ಹರೀಶ್ ಕುಮಾರ್ ಕೆ.,)
ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಹಾಗೂ
ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಧಂಡಾಧಿಕಾರಿ,
ಉತ್ತರ ಕನ್ನಡ ಜಿಲ್ಲೆ ಕಾರವಾರ.

ಪ್ರತಿ: ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ, ಉತ್ತರ ಕನ್ನಡ ಕಾರವಾರ ರವರಿಗೆ ಸೂಕ್ತ ಕ್ರಮಕ್ಕಾಗಿ,

ಪ್ರತಿ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ , ಉತ್ತರ ಕನ್ನಡ ಕಾರವಾರ ರವರಿಗೆ ಸೂಕ್ತ ಕ್ರಮಕ್ಕಾಗಿ,

ಪ್ರತಿ: ಜಿಲ್ಲೆಯ ಎಲ್ಲಾ ತಹಶೀಲ್ದಾರರು ಮತ್ತು ಸಹಾಯಕ ಕಮೀಶನರ ರವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ: ಜಿಲ್ಲೆಯ ಯಾವತ್ತೂ ಸರಕಾರಿ/ಅರೇ-ಸರಕಾರಿ ಮತ್ತು ಸರಕಾರಿ ಸ್ವಾಮೀತ್ವದ ಯಾವತ್ತೂ ಸಂಘ-ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಜನಸಂಪರ್ಕ ಅಧಿಕಾರಿ ಕಾರವಾರರವರಿಗೆ,

2/ ಸದರಿ ಆದೇಶವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಕಟವಾಗುವ ಯಾವತ್ತು ದಿನಪತ್ರಿಕೆಗಳಲ್ಲಿ ಸರ್ಕಾರಕ್ಕೆ ಖರ್ಚು ಬಾರದ ರೀತಿಯಲ್ಲಿ ಸಾರ್ವಜನಿಕ ಪ್ರಕಟಣೆ ನೀಡಲು ಸೂಚಿಸಿದೆ.

ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಹಾಗೂ
ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಧಂಡಾಧಿಕಾರಿ,
ಉತ್ತರ ಕನ್ನಡ ಜಿಲ್ಲೆ ಕಾರವಾರ.

Scanned with CamScanner